…ಕೆ
…ERENCE BRANCH

…ನಾಂಕ : DATE : 1 8/9/20

# …ನಕ್ಕೆ 3 ಬಾರಿ ಸ್ಯಾನಿಟೈಸೇಷನ್
# …ತ್ತಿನ ಕೋಟೆ

**…ವೇಶನಕ್ಕೆ ಸಕಲ ಸಿದ್ಧತೆಯನ್ನು ಪೂರ್ಣಗೊಳಿಸಲಾಗಿದೆ. ಈ …ಲು ವಿಧಾನಸಭೆ ಸಚಿವಾಲಯ ಅಂತಿಮ ಸ್ಪರ್ಶ ನೀಡುತ್ತಿದೆ. …ಮುಂಜಾಗ್ರತಾ ಕ್ರಮಗಳ ಹಿನ್ನೆಲೆಯಲ್ಲಿ ಕುಳಿತುಕೊಳ್ಳುವ …ರ ಸಂಪೂರ್ಣ ಮಾಹಿತಿ ಇಲ್ಲಿದೆ.**

ಮೇಜಿನ ಮೇಲೆ 50 ಎಂಎಲ್ ಸ್ಯಾನಿಟೈಸರ್ ಬಾಟಲ್‌ಗಳನ್ನು ಇರಿಸಲಾಗುವುದು. ಪ್ರತಿಯೊಬ್ಬ ಸಚಿವರೂ ಆದಷ್ಟು ಕಡಿಮೆ ಸಿಬ್ಬಂದಿಯನ್ನು ಕರೆತರಬೇಕು. ಸದನದೊಳಗೆ ಓರ್ವ ಸಚಿವರಿಗೆ ಓರ್ವ ಆಪ್ತ ಸಹಾಯಕರ ಪ್ರವೇಶಕ್ಕೆ ಮಾತ್ರ ಅವಕಾಶವಿರುತ್ತದೆ. ನಿಯೋಗಗಳಿಗೆ ಅವಕಾಶವಿಲ್ಲ. ಇದಕ್ಕಾಗಿ ಸಚಿವರ ಕಚೇರಿಯಲ್ಲಿ ಭೇಟಿಗೆ ಅವಕಾಶವನ್ನು ಕಲ್ಪಿಸಲಾಗಿದೆ. ಈ ಬಾರಿ ಕಾಗದ ರಹಿತ ಅಧಿವೇಶನ ನಡೆಸಲು ಪ್ರಯತ್ನಿಸಲಾಗುತ್ತದೆ. ಅದಕ್ಕಾಗಿ ಏನೇ ಸುತ್ತೋಲೆಗಳು, ಶಾಸನಗಳ ಕರಡು ಪ್ರತಿಗಳಿದ್ದರೂ ಅವುಗಳನ್ನು ಇ-ಮೇಲ್ ಮುಖಾಂತರ ಸದಸ್ಯರಿಗೆ ತಲುಪಿಸಲಾಗುತ್ತದೆ. ಮಾಧ್ಯಮದವರಿಗೂ ಇದೇ ನಿಯಮ ಅನ್ವಯಿಸುತ್ತದೆ.

**ಮಾಧ್ಯಮದವರು ಮೇಲೆ**

ಕೊರೊನಾ ಹಿನ್ನೆಲೆಯಲ್ಲಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವ ಸಲುವಾಗಿ ಈ ಬಾರಿ ಮಾಧ್ಯಮದ ಎಲ್ಲ ಪ್ರತಿನಿಧಿಗಳಿಗೆ ಸಾರ್ವಜನಿಕರ ಗ್ಯಾಲರಿಯಲ್ಲಿ ಕುಳಿತುಕೊಳ್ಳಲು ವ್ಯವಸ್ಥೆ ಮಾಡಲಾಗಿದ್ದು,ಟಿವಿ,ಸಿಸ್ಟಮ್ಸ್,ಇಂಟರ್‌ನೆಟ್,ಲ್ಯಾಂಡ್‌ಲೈನ್ ಫೋನ್ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.,ಇದು ತಾತ್ಕಾಲಿಕ ಬದಲಾವಣೆ ಮಾತ್ರ, ಈ ಮೊದಲಿನ 40 ಇಯರ್‌ಫೋನ್‌ಗಳು ಸೇರಿ ಇನ್ನೂ 20 ಹೊಸ ಇಯರ್‌ಫೋನ್‌ಗಳನ್ನು ತರಿಸಲಾಗಿದ್ದು, ಮಾಧ್ಯಮದವರ ವರದಿಗಾರಿಕೆಗೆ ಯಾವ ತೊಂದರೆಯಾಗದಂತೆ ನೋಡಿಕೊಳ್ಳಲಾಗುವುದು.

**ಕ್ಯಾಂಟೀನ್ ಶಿಫ್ಟ್**

ವಿಧಾನಸೌಧದೊಳಗೆ ಇದ್ದ ಕ್ಯಾಂಟೀನ್‌ಅನ್ನು ಎತ್ತಂಗಡಿ ಮಾಡಲಾಗಿದೆ. ಸದ್ಯ ಸೆಂಟ್ರಲ್ ಹಾಲ್‌ಗೆ ಉಪಹಾರ ಕೇಂದ್ರವನ್ನು ಶಿಫ್ಟ್ ಮಾಡಲಾಗಿದೆ.

**ಶ್ರದ್ಧಾಂಜಲಿ ಬಳಿಕ ಸದನ ಮುಂದುವರಿಕೆ**

ಸಂಪ್ರದಾಯದಂತೆ ಸದನದ ಆರಂಭ ದಿನ ಅಗಲಿದ ಗಣ್ಯರಿಗೆ ಶ್ರದ್ಧಾಂಜಲಿ ಸಲ್ಲಿಸಿ ಅಧಿವೇಶನವನ್ನು ಮಾರನೇ ದಿನಕ್ಕೆ ಮುಂದೂಡುವುದು ವಾಡಿಕೆ. ಆದರೆ, ಇದೇ ಮೊದಲ ಬಾರಿಗೆ ಎಂಬಂತೆ ಶ್ರದ್ಧಾಂಜಲಿ ಬಳಿಕ ಮಧ್ಯಾಹ್ನವೇ ಸದನವನ್ನು ಮುಂದುವರಿಸಲಾಗುತ್ತದೆ. ಇದಕ್ಕೆ ಆಡಳಿತ ಪಕ್ಷ ಸೇರಿದಂತೆ ವಿಪಕ್ಷ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಸಹಮತ ಸೂಚಿಸಿವೆ. ತದನಂತರ ಸ್ಪೀಕರ್ ಅವರು ಬ್ಯುಸಿನೆಸ್ ಅಡ್ವಾಯ್ಸರಿ ಕಮಿಟಿ ಸಭೆ ನಡೆಸಲು ತೀರ್ಮಾನಿಸಲಾಗಿದೆ ಎಂದು ಎಂದು ವಿಧಾನಸಭೆ ಸಚಿವಾಲಯದ ಆಪ್ತ ಮೂಲಗಳಿಂದ ತಿಳಿದು ಬಂದಿದೆ.






# ಮೊದಲ ಬಾರಿ ಡಿಜಿಟಲ್ ಸ್ಪರ್ಶ

**ಸಂ.ಸಮಾಚಾರ ಬೆಂಗಳೂರು**

ಆಧುನಿಕ ತಂತ್ರಜ್ಞಾನವನ್ನು ಸದ್ಬಳಕೆ ಮಾಡಿಕೊಳ್ಳುವ ಮೂಲಕ ಈಗಾಗಲೇ ಸಂಸತ್ ಕಾರ್ಯನಿರ್ವಹಿಸುತ್ತಿರುವ ರೀತಿಯಲ್ಲೇ ರಾಜ್ಯ ವಿಧಾನಮಂಡಲವೂ ಡಿಜಿಟಲ್ ವ್ಯವಸ್ಥೆಯತ್ತ ಮನಸ್ಸು ಮಾಡಿದೆ. ಸೋಮವಾರದಿಂದ ನಡೆಯುವ ಮಳೆಗಾಲದ ಅಧಿವೇಶನವೇ ಒಂದು ಹಂತದ ಉನ್ನತೀಕರಣಕ್ಕೆ ಸಾಕ್ಷಿಯಾಗಲಿದೆ.

- ಕೊರೊನಾ ಸೋಂಕಿನ ಹಾವಳಿ ಹಿನ್ನೆಲೆ ಆಸನದ ಮಧ್ಯೆ ಫೈಬರ್‌ಶೀಟ್ ಅಳವಡಿಕೆ
- ಶೂನ್ಯ ಕಾಗದದತ್ತ ಸಭಾಧ್ಯಕ್ಷರ ಗಮನ
- ವಿವರಣಾತ್ಮಕ ಪ್ರಶ್ನೆಗೆ ಈಮೇಲ್‌ನ ಉತ್ತರ

**ಕೊರೊನಾ ಪರೀಕ್ಷೆ ಕಡ್ಡಾಯ**

ಕೊರೊನಾ ಹಾವಳಿಯಿಂದಾಗಿ ಮುಂದೂಡಲ್ಪಡುತ್ತಿದ್ದ ಅಧಿವೇಶನ ಇದೇ 21 ರಿಂದ ಹತ್ತು ದಿನಗಳ ಕಾಲ ನಡೆಯಲಿದೆ. ಈಗಾಗಲೇ ಸಿದ್ಧತೆಗಳು ನಡೆಯುತ್ತಿವೆ. ಆಸನಗಳ ಮಧ್ಯೆ ಫೈಬರ್‌ಶೀಟ್‌ಗಳನ್ನು ಅಳವಡಿಸಲಾಗಿದೆ. ಮಾಸ್ಕ್ ಧಾರಣೆ ಕಡ್ಡಾಯವಾಗಿದೆ. ಸದನದ ಪ್ರತೀ ಮೂಲೆಗಳಲ್ಲಿಯೂ ಹ್ಯಾಂಡ್ ಸ್ಯಾನಿಟೈಸರ್ ಇಡಲಾಗುತ್ತಿದೆ. ಅಲ್ಲದೆ, ಅಧಿವೇಶನಕ್ಕೆ ಬರುವ ಸಚಿವರು, ಶಾಸಕರು, ಅಧಿಕಾರಿಗಳು, ಪತ್ರಕರ್ತರಿಗೂ ಕೋವಿಡ್ ಪರೀಕ್ಷೆ ಕಡ್ಡಾಯವಾಗಿದ್ದು ನೆಗೆಟಿವ್ ಬಂದಿದ್ದಲ್ಲಿ ಮಾತ್ರ ಪ್ರವೇಶವಿದೆ.

**'ಸಿಡಿ'ಗಳಲ್ಲಿ ಉತ್ತರ**

ಕೋವಿಡ್ ಕಾರಣಕ್ಕೆ ಸ್ಪೀಕರ್ ವಿಶ್ವೇಶ್ವರಹೆಗಡೆ ಕಾಗೇರಿ ಅವರು ಕೆಲ ಮಹತ್ವದ ನಿರ್ಣಯಗಳಿಗೆ ಮುಂದಾಗಿದ್ದಾರೆ. ಅಧಿವೇಶನದ ಅಮೂಲ್ಯ ಸಮಯ ವ್ಯರ್ಥವಾಗದಂತೆ ಕಲಾಪದ ವೇಳೆ ಪ್ರಮುಖ ಪ್ರಶ್ನೆಗಳಿಗೆ ಮಾತ್ರ ಅವಕಾಶ ನೀಡಲು ನಿರ್ಧರಿಸಿದ್ದಾರೆ. ಅಂತಹ ಪ್ರಶ್ನೆಗಳನ್ನು ಗುರುತು ಮಾಡಿ ಅವುಗಳನ್ನು ಪ್ರತ್ಯೇಕವಾಗಿ ಮುದ್ರಿಸಿ ಕಲಾಪದ ವೇಳೆ ಕೇಳಲು ಅನುಮತಿ ನೀಡಲಾಗುತ್ತದೆ.

ಉಳಿದ ಬಾಕಿ ಪ್ರಶ್ನೆಗಳಿಗೆ ಇಲಾಖೆಯ ಸಚಿವರು ಮತ್ತು ಅಧಿಕಾರಿಗಳಿಗೆ ಈಮೇಲ್ ಮೂಲಕ ರವಾನಿಸಿ ಉತ್ತರ ಪಡೆಲಾಗುತ್ತದೆ. ಉತ್ತರಗಳನ್ನು ಸಿಡಿ ಮೂಲಕ ಶಾಸಕರಿಗೆ ನೀಡಲು ನಿರ್ಧರಿಸಲಾಗಿದೆ.

**ವೈಫೈ ಸಂಪರ್ಕ ಪರಾಮರ್ಶೆ**

ಕಾಗದ ಬಳಕೆಯನ್ನು ಸೀಮಿತಗೊಳಿಸಲು ಯೋಜನೆ ರೂಪಿಸಲಾಗಿದೆ. ಈ ಬಾರಿ ಪ್ರಾಯೋಗಿಕವಾಗಿ ಜಾರಿಯಾಗಲಿದ್ದು ಭವಿಷ್ಯದಲ್ಲಿ ಶೂನ್ಯ ಕಾಗದ ಬಳಕೆಗೆ ಉದ್ದೇಶಿಸಲಾಗಿದೆ.



ಚಳಿಗಾಲದ ಅಧಿವೇಶನದ ಹೊತ್ತಿಗೆ ಶಾಸಕರಿಗೆ ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳನ್ನು ನೀಡಿ, ಪ್ರಶ್ನೆಗಳನ್ನು ಪರಿಶೀಲಿಸಲು ಅವಕಾಶ ನೀಡುವ ಬಗ್ಗೆಯೂ ಚಿಂತನೆ ನಡೆದಿದೆ. ಸದನದ ವೈಫೈ ಸಂಪರ್ಕದ ಸಾಮರ್ಥ್ಯ ಪರಾಮರ್ಶಿಸಿ ಸಂಪೂರ್ಣ ಡಿಜಿಟಲ್ ವ್ಯವಸ್ಥೆ ಅಳವಡಿಸುವ ಉದ್ದೇಶ ಸರ್ಕಾರಕ್ಕಿದೆ.

**ಪ್ರಶ್ನೆಗಳಿಗೂ ಬೀಳಲಿದೆ ಕತ್ತರಿ**

10 ದಿನಗಳ ಅಧಿವೇಶನ ಸುಗಮವಾಗಿ ನಡೆಯಬೇಕಿದೆ. ಕಾಂಗ್ರೆಸ್ 1200 ಪ್ರಶ್ನೆಗಳನ್ನು ಸಿದ್ಧಪಡಿಸಿರುವುದು ಸಚಿವಾಲಯ ಸಿಬ್ಬಂದಿಗೆ ಉತ್ತರ ಸಿದ್ಧಪಡಿಸುವುದೇ ಸವಾಲೇ ಸರಿ.